14	ಮದ್ದೇಬಿಹಾಳ್	ಹಿರಿಯ ಪ್ರಾಥಮಿಕ ಶಾಲೆ ತಾಳಿಕೋಟೆ	ಕನ್ನಡ	2010–11
15	ಸಿಂಧಗಿ	ಹಿ.ಪ್ರಾ.ಶಾಲೆ ಖೈನೂರ	ಕನ್ನಡ	2009–10
16	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಆಲ್ಮೆಲ್	ಕನ್ನಡ	2010–11
17	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಬೊಮ್ಮನಹಳ್ಳಿ	ಕನ್ನಡ	2010–11
18	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ರಾಂಪುರ	ಕನ್ನಡ	2010–11
19	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಕೆರುಟಗಿ	ಕನ್ನಡ	2010–11
20	ಸಿಂಧಗಿ	ಹಿರಿಯ ಪ್ರಾಥಮಿಕ ಶಾಲೆ ಕೊಕ್ಕಟನೂರ್	ಕನ್ನಡ	2010–11
21	ಸಿಂಧಗಿ	ಯು.ಬಿ.ಹಿರಿಯ ಪ್ರಾಥಮಿಕ ಶಾಲೆ ಮಲಗಾಂವ್	ಉರ್ದು	2010–11
22	ಬಸವನ ಬಾಗೇವಾಡಿ	ಕೆ.ಬಿ.ಎಸ್.ಪ.ಎಸ್. ತಳೇವಾಡ	ಕನ್ನಡ	2009–10
23	ಬಸವನ ಬಾಗೇವಾಡಿ	ಹಿರಿಯ ಪ್ರಾಥಮಿಕ ಶಾಲೆ ದಿಂಡಾವಾರ	ಕನ್ನಡ	2010–11
24	ಬಸವನ ಬಾಗೇವಾಡಿ	ಹಿರಿಯ ಪ್ರಾಥಮಿಕ ಶಾಲೆ ಕುಬಕಡ್ಡಿ	ಕನ್ನಡ	2010–11

ಮೈಸೂರು ವಿಶ್ವವಿದ್ಯಾನಿಲಯದ ಅಕ್ರಮ ನೇಮಕಾತಿ

218 (15) ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಕ್ರಮ ನೇಮಕಾತಿಯ ಬಗ್ಗೆ ಈ ಹಿಂದೆ ವಿಧಾನಸಭೆಯಲ್ಲಿ ಚರ್ಚೆಯಾಗಿದ್ದು, ಅಕ್ರಮ ನೇಮಕಾತಿ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಕ್ರಮ ನೇಮಕಾತಿಗೆ ಕಾರಣರಾದವರ ವಿರುದ್ಧ ಯಾವುದೇ

ಶಿಸ್ತುಕ್ರಮ ಕೈಗೊಳ್ಳದಿರಲು ಕಾರಣವೇನು; (ಮಾಹಿತಿ ನೀಡುವುದು);

ಇ) ಈ ಅಕ್ರಮ ನೇಮಕಾತಿಯಲ್ಲಿ ಯಾವ ಯಾವ ಹುದ್ದೆಗಳನ್ನು ಯಾವ ಯಾವ ವರ್ಗದವರಿಗೆ ಎಷ್ಟೆಷ್ಟು ಸಂಖ್ಯೆಯಲ್ಲಿ ಭರ್ತಿ ಮಾಡಲಾಗಿದೆ; (ವ್ಯಂದವಾರು ಸಮಗ್ರ ಮಾಹಿತಿ ಒದಗಿಸುವುದು);

ಉ) ಈ ಅಕ್ರಮ ನೇಮಕಾತಿಗೆ ಕಾರಣರಾದವರ ವಿರುದ್ಧ ಎಷ್ಟು ದಿನಗಳಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು; ಅಕ್ರಮ ನೇಮಕಾತಿಯಿಂದ ವಂಚಿತರಾಗಿರುವ ಅಭ್ಯರ್ಥಿಗಳಿಗೆ ಸರ್ಕಾರ ಯಾವ ರೀತಿಯಲ್ಲಿ ನ್ಯಾಯವನ್ನು ಒದಗಿಸಲು ನಿರ್ಧರಿಸಲಾಗಿದೆ? (ಮಾಹಿತಿ ಒದಗಿಸುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಅಕ್ರಮ ನೇಮಕಾತಿಯ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (PILs - ರಿಟ್ ಪಿಟಿಷನ್ ಸಂಖ್ಯೆ 27493/2011 ಮತ್ತು ರಿಟ್ ಪಿಟಿಷನ್ ಸಂಖ್ಯೆ 38634/2011) ಗಳನ್ನು ದಾಖಲಿಸಿದ್ದು, ಸದರಿ ರಿಟ್ ಅರ್ಜಿಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಆದೇಶದಂತೆ ಮುಂದಿನ ಕ್ರಮವಹಿಸಲಾಗುವುದು.

ಇ) ವಿವರಗಳನ್ನು ಅನುಬಂಧ–ಅ ದಲ್ಲಿ ಲಗತ್ತಿಸಿದೆ.

ಈ) ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಗಳಿಗೆ (PILs) ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡುವ ಆದೇಶದಂತೆ ಮುಂದಿನ ಕ್ರಮವಹಿಸಲಾಗುವುದು.

ಅನುಬಂಧ – ಅ

2007ನೇ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೇಮಕಹೊಂದಿರುವ ಬೋಧಕರ ವೃಂದವಾರು ವಿವರಣಾ ಪಟ್ಟಿ

ಕ್ರ.ಸಂ.	ಪದನಾಮ	ವೃಂದವಾರು ನೇಮಕವಾದವರುಗಳ ಸಂಖ್ಯೆ								ಒಟ್ಟು
		GM	SC	ST	CAT I	II A	II B	III A	III B	
1	ಪ್ರಾಧ್ಯಪಕರು	05	01	–	01	02	–	01	–	10
2	ಪ್ರವಾಚಕರು	05	02	01	–	03	01	08	03	23
3	ಉಪನ್ಯಾಸಕರು (ಪಿ.ಜಿ.)	18	10	02	03	05	–	02	01	41
4	ಉಪನ್ಯಾಸಕರು (ಯು.ಜಿ)	23	08	01	04	02	01	01	–	40
	ಒಟ್ಟು	**51**	**21**	**04**	**08**	**12**	**02**	**12**	**04**	**114**

ಅಂಗವಿಕಲರ ವೇತನ

257 (732) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) :– ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಅಂಗವಿಕಲರ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಇದರಲ್ಲಿ ಮಹಿಳೆಯರ ಮತ್ತು ಪುರಷರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿರುವ ಮೊತ್ತವೆಷ್ಟು;

ಈ) ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತಿರುವ ಮೊತ್ತವೆಷ್ಟು? (ವಿವರ ನೀಡುವುದು)